# <u>ಮಂಗಳಂ - ಜಯ ಜಯ ಮಂಗಳ ಹರಿಗೆ</u>

**Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.

ರಾಗ: ಮಧ್ಯಮಾವತಿ ತಾಳ: ರೂಪಕ

ಮಂಗಳಂ ಜಯ ಮಂಗಳಂ ॥ ಪ ॥

ಜಯ ಜಯ ಮಂಗಳ ಹರಿಗೆ
ಜಯ ಜಯ ಮಂಗಳ ಸಿರಿಗೆ
ಜಯ ಜಯ ವರದ ಪುರಂದರ ವಿಠಲಗೆ ॥ 1 ॥

ಜಯ ವಾಸುದೇವನ ಸುತಗೆ
ಜಯ ಜಯ ಭೀಷ್ಮಕ ಸುತೆಗೆ
ಜಯ ಜಯ ದಂಪತಿ ವರದ ಪುರಂದರ ವಿಠಲಗೆ ॥ 2 ॥

ಜಯ ಜಯ ದಶರಥ ಸುತಗೆ
ಜಯ ಜಯ ಜನಕನ ಸುತೆಗೆ
ಜಯ ಜಯ ದಂಪತಿ ವರದ ಪುರಂದರ ವಿಠಲಗೆ ॥ 3 ॥

ಪರಮಾನಂದವು ಹರಿಗೆ
ಪರಮಾನಂದವು ಸಿರಿಗೆ
ಪರಮಾನಂದವು ವರದ ಪುರಂದರ ವಿಠಲಗೆ ॥ 4 ॥

ಶುಭವಿದು ಶೋಭನ ಹರಿಗೆ
ಶುಭವಿದು ಶೋಭನ ಸಿರಿಗೆ
ಶುಭವಿದು ಶೋಭನ ವರದ ಪುರಂದರ ವಿಠಲಗೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದರಲ್ಲಿ ಶ್ರೀ ಹರಿಗೆ ಮತ್ತು ಲಕ್ಷ್ಮೀ ದೇವಿಗೆ, ಇಬ್ಬರಿಗೂ ದಾಸರು ಮಂಗಲವನ್ನು ಕೋರಿದ್ದಾರೆ.

**ಭೀಷ್ಮಕ** = ವಿದರ್ಭ ದೇಶದ ಅರಸು, ರುಕ್ಮಿಣಿಯ ತಂದೆ

**ದಂಪತಿ** = ಗಂಡ - ಹೆಂಡಿರ ಜೊತೆ

**ಸುತ** = ಮಗ

**ಸುತೆ** = ಮಗಳು

**Classification:** Keerthane
**Ankita:** purandara vittala
**Location:** NA
**Category:** mangala song, Krishna Stuti
**Sub-Category:** Vishnu, Krishna, Lakshmi, Rukmini, Dasharatha, Vasudeva, shubha, Ananda
**Pravachana:** NA
**Explanation:** NA